## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ

**ಸಿ.ಸಿ ನಂ. 292/2019**

ಸಿ.ಡಬ್ಲ್ಯೂ -5
ಪಿ.ಡಬ್ಲ್ಯೂ -5

ಹೆಸರು : ಅಂಜಲಿ
ತಂದೆ:ಗಂಡ : ದಯಾನಂದ ಮುಲಗೆ
ವಯಸ್ಸು : 32 ವರ್ಷ
ಉದ್ಯೋಗ : ಮನೆಗೆಲಸ
ವಾಸಸ್ಥಳ : ಕೆರೂರ

ದಿನಾಂಕ:03.07.2024
ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ :**

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-1 ನನ್ನ ಗಂಡ, ಚಾಸಾ-2, 3, 7 ರಿಂದ 10, 12, 13 ಪರಿಚಯ ಇರುತ್ತಾರೆ. ಚಾಸಾ-4 ನನ್ನ ಅತ್ತೆ, ಚಾಸಾ-6 ನೆಗೆಣ್ಣೆ, ಚಾಸಾ-11 ನನ್ನ ಭಾವ ಇರುತ್ತಾರೆ. ನಾವು ಆವತ್ತು ನಮ್ಮ ಶೆಡ್ಡಿನಲ್ಲಿ 5-6 ಜನ ಕೆಲಸಗಾರರೊಂದಿಗೆ ಕೆಲಸ ಮಾಡುತ್ತಿದ್ದೇವು. ಚಾಸಾ-1 ರವರು ಶೆಡ್ಡಿನ ಮೇಲೆ ಜಾಳಿಗೆ ಹಾಕಲು ಹೋದಾಗ ಕರೆಂಟ ತಂತಿ ನನ್ನ ಗಂಡನ ಕುತ್ತಿಗೆ ಮೇಲೆ ಬಿದ್ದು ವಿದ್ಯುತ್ ಸಂಚಾರವಾಗಿ ಕೆಳಗೆ ಬಿದ್ದಿರುತ್ತಾರೆ. ನಂತರ ಚಾಸಾ-10, 12, 13 ರವರು ಸೇರಿ ವಾಹನದಲ್ಲಿ ಚಾಸಾ-1 ರವರನ್ನು ಸೋಲಾಪೂರದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನಾವು 4-5 ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇವೆ. ಸಾಕ್ಷಿ ಮುಂದುವರೆದು ನಾವು ಕೆಇಬಿಯವರಿಗೆ ಸದರಿ ವಿದ್ಯುತ ತಂತಿ ತೆಗೆಯಬೇಕು ಎಂದು ಅರ್ಜಿ ನೀಡಿದ್ದರೂ ಸಹಿತ ಅವರು ತೆಗೆದಿರಲಿಲ್ಲ ಎಂದು ಹೇಳುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು : ಸ.ಸ.ಅ. ವಕೀಲರಿಂದ.**

ನನ್ನ ಮಾವನ ಹೆಸರಿನಲ್ಲಿ ಸರ್ವೆ ನಂ.3/1 ರಲ್ಲಿ 12 ಎಕರೆ ಜಮೀನು ಇರುತ್ತದೆ ಎಂದರೆ ಸರಿ. 3 ಎಕರೆ ಜಮೀನಿನಲ್ಲಿ ನನ್ನ ಗಂಡ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ದ್ರಾಕ್ಷಿ ಬೆಳೆ ಇರುತ್ತದೆ ಎಂದರೆ ಸರಿ. ದ್ರಾಕ್ಷಿ ಒಣಗಿಸಲು ತಾತ್ಕಾಲಿಕ ಶೆಡ್ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸದರಿ ಶೆಡ್ಡಿನ ಮೇಲೆ ವಿದ್ಯುತ್ ತಂತಿ ಹಾದು ಹೋಗಿರುತ್ತದೆ ಎಂದರೆ ಸರಿ. ದಿ.07.03.2019 ರಂದು ಬೆಳಗ್ಗೆ 11.00 ಗಂಟೆಗೆ ನಾನು, ಚಾಸಾ-1, 4, 5 ರಿಂದ 9 ಹೊಲಕ್ಕೆ ಹೋಗಿರುತ್ತೇವೆ ಎಂದರೆ ಸರಿ. ಚಾಸಾ-1 ರವರು ಶೆಡ್ಡಿನ ಮೇಲೆ ರೇಷ್ಮೆ ನೇಯುತ್ತ ಕುಳಿತಿದ್ದರು ಎಂದರೆ ಸರಿ. ವಿದ್ಯುತ ತಂತಿ ಎಂಗಲ್ ಕೆಳಗೆ ಬಿದ್ದಾಗ ಚಾಸಾ-1 ರವರು ನಾನು ಸತ್ತೆ ಎಂದು ಚೀರಿದರು ಎಂದರೆ ಸರಿ. ನಾವು ಅವರ ಬಳಿ ಹೋಗಿ ನೋಡಲಾಗಿ ಕರೆಂಟ್ ತಗುಲಿ ಎಡಕಿನ ಮೇಲೆ ಸುಟ್ಟ ಗಾಯ, ಬಲಕಿವಿಗೆ, ಮೂಗಿನ ಬಲಭಾಗಕ್ಕೆ ಸುಟ್ಟ ಗಾಯ ಆಗಿ ಎರಡು ಪಾದಗಳಿಂದ ವಿದ್ಯುತ ಸಂಚಾರ ಆಗಿರುತ್ತದೆ ಎಂದರೆ ಸರಿ. ಚಾಸಾ-10

ರವರು ಚಾಸಾ-11 ರವರಿಗೆ ಕರೆ ಮಾಡಿ ವಿಷಯ ತಿಳಿಸಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ಹಲವಾರು ಬಾರಿ ಮಾದನ ಹಿಪ್ಪರಗಾ ಕೆಇಬಿ ಕಚೇರಿಗೆ ಹೋಗಿ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಮುಂಜಾಗ್ರತಾ ಕ್ರಮ ಕೈಗೊಳ್ಳದೇ ಇರುವುದರಿಂದ ಚಾಸಾ-1 ರವರಿಗೆ ಗಾಯ ಆಗಿರುತ್ತದೆ ಎಂದರೆ ಸರಿ. ನಾನು ಈ ರೀತಿ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ**

ನಾನು ಪೋಲಿಸರಿಗೆ ಭೇಟಿ ಆಗಿರುವುದಿಲ್ಲ ಸಾಕ್ಷಿ ಮುಂದುವರೆದು ಚಾಸಾ-11 ರವರು ಭೇಟಿ ಆಗಿರುತ್ತಾರೆ ಎಂದು ಹೇಳುತ್ತಾರೆ. ಚಾಸಾ-11 ರವರೇ ಪೋಲಿಸರಿಗೆ ಹೇಳಿಕೆ ನೀಡಿರುತ್ತಾರೆ ಎಂದರೆ ಸರಿ. ವಿದ್ಯುತ ತಂತಿ ನಮ್ಮ ಹೊಲದಲ್ಲಿ ಉತ್ತರ ದಕ್ಷಿಣ ದಿಕ್ಕಿನಲ್ಲಿ ಇರುತ್ತದೆ. ಸದರಿ ವಿದ್ಯುತ ತಂತಿ 10-15 ವರ್ಷಗಳಿಂದ ಇರುತ್ತದೆ. ಸದರಿ ವಿದ್ಯುತ ತಂತಿಯನ್ನು ತೆಗೆಯಬೇಕು ಎಂದು ಅರ್ಜಿ ನೀಡಿಲ್ಲ ಎಂದರೆ ಸರಿ. ಶೇಡ್ ನ್ನು ಕಟ್ಟಿ 10 ವರ್ಷಗಳಾಗಿರುತ್ತದೆ. ಸದರಿ ಶೆಡ್ ವಿದ್ಯುತ ತಂತಿ ಕೆಳಗಡೆ ಇರುತ್ತದೆ ಎಂದರೆ ಸರಿ. ಶೆಡ್ 10-12 ಅಡಿ ಎತ್ತರದಲ್ಲಿ ಇರುತ್ತದೆ. ವಿದ್ಯುತ ತಂತಿ ಶೆಡ್ಡಿನ ಮೇಲೆ 6 ಅಡಿ ಅಂತರದಲ್ಲಿ ಇರುತ್ತದೆ. ವಿದ್ಯುತ ಕಂಬವು 15 ರಿಂದ 20 ಅಡಿ ಎತ್ತರದಲ್ಲಿ ಇವೆ. ಸದರಿ ಕಂಬದ ತುದಿಗೆ ವಿದ್ಯುತ ತಂತಿ ಮತ್ತು ಎಂಗಲ್ ಗಳನ್ನು ಜೋಡಿಸಿರುತ್ತಾರೆ ಎಂದರೆ ಸರಿ. ಸದರಿ ತಂತಿ ಮತ್ತು ಎಂಗಲಗಳು ಬಿಗಿಯಾಗಿ ಜೋಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಎಂಗಲಗಳು ಕಬ್ಬಿಣದ್ದು ಎಂದರೆ ಸರಿ. ಸದರಿ ಎಂಗಲ್ ಗಳು ಸಾಮಾನ್ಯವಾಗಿ ಮುರಿಯುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದನ್ನು ಬೇರ್ಪಡಿಸದೇ ಸರಿಯುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಘಟನೆ ನಡೆಯುವ ಸಮಯದಲ್ಲಿ ಯಾರು ಕೆಲಸ ಮಾಡುತ್ತಿರಲಿಲ್ಲ. ಸದರಿ ವಿದ್ಯುತ ತಂತಿಗೆ ನಾವು ಯಾವುದೇ ಹುಕ್ ಹಾಕಿರಲಿಲ್ಲ. ನೀರಾವರಿ ಸಲುವಾಗಿ ಬಾವಿ ಇರುತ್ತದೆ. ಸದರಿ ಬಾವಿಗೆ ಅದೇ ವಿದ್ಯುತ ಕಂಬದಿಂದ ವಿದ್ಯುತ ಸಂಪರ್ಕ ಪಡೆದಿರುತ್ತೇವೆ ಎಂದರೆ ಸರಿ. ಸದರಿ ವಿದ್ಯುತ ಮೀಟರಗಳನ್ನು ದಿನವೂ ಉಪಯೋಗಿಸುತ್ತೇವೆ ಎಂದರೆ ಸರಿ. ನಾನು ಚಾಸಾ-1 ರವರಿಗೆ ವಿದ್ಯುತ ತಂತಿ ಹಾದು ಹೋದ ಕಾರಣ ಅದರ ಕೆಳಗೆ ಶೆಡ್ ಮಾಡಬೇಡಿ ಎಂದು ಹೇಳಿರುವುದಿಲ್ಲ. ಚಾಸಾ-1 ರವರು ಶೇಡ್ ಮೇಲೆ ಬಗ್ಗಿ ನಿಂತು ಕೆಲಸ ಮಾಡುತ್ತಿದ್ದರು. ಸದರಿ ಎಂಗಲ್ ಇವತ್ತು ಅಲ್ಲೆ ಇರುತ್ತದೆ ಎಂದರೆ ನಾನು ನೋಡಿಲ್ಲ. ಇವತ್ತಿಗೂ ನಾವು ಹೊಲದಲ್ಲಿ ವಿದ್ಯುತ ಉಪಯೋಗ ಮಾಡುತ್ತೇವೆ. ಕಂಬದಿಂದ ವಿದ್ಯುತ ತಂತಿ ಕೆಳಗೆ ಬಿದ್ದಿರುವುದಿಲ್ಲ ಎಂದರೆ ಸರಿ. ನಾವು ಆ ದಿನ 10.30 ಗಂಟೆಗೆ ಹೊಲಕ್ಕೆ ಹೋಗಿರುತ್ತೇವೆ. ಶೆಡ್ಡಿನ ಮೇಲೆ ಜಾಳಿಗೆ ಹೆಣೆಯುತ್ತಿದ್ದೇವು ಅಲ್ಲಿ ಏನು ಹಾಕಿರಲಿಲ್ಲ. ಚಾಸಾ-1 ರವರು ನೆಲಕ್ಕೆ ಬಿದ್ದಾಗ ಅವರ ಹಣೆಗೆ ಪೆಟ್ಟು ಆಗಿರುವುದಿಲ್ಲ. ಅವರು ಹಾಕಿಕೊಂಡ ಬನಿಯನ ಸುಟ್ಟಿತ್ತು. ಪೋಲಿಸರು ಸುಟ್ಟ ಬನಿಯನ ನೋಡಿದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-1 ರವರ ಮೇಲೆ ಎಂಗಲ್ ಬಿದ್ದು ಗಾಯ ಆಗಿ ಬನಿಯನ ಸುಟ್ಟಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಕೆಇಬಿ ಕಚೇರಿಯಲ್ಲಿ ಚಾಸಾ-11 ರವರು ಅರ್ಜಿ ನೀಡಿದ್ದು ಯಾವ ತಾರೀಖಿನಂದು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಎಷ್ಟು ಬಾರಿ ಅರ್ಜಿ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕೆಇಬಿಯವರಿಗೆ ಯಾವುದೇ ಅರ್ಜಿ ನೀಡದಿದ್ದರೂ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಶೆಡಿತ್ತಿನ ಮೇಲೆ ಕೆಲಸ ಮಾಡುವಾಗ ವಿದ್ಯುತ ಎಂಗಲ ಬಿದ್ದು ವಿದ್ಯುತ ತಗಲಿ ಗಾಯ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ರವರು ಸೇರಿಕೊಂಡು ಪರಿಹಾರಕ್ಕಾಗಿ ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿ. ನಾವು ಪರಿಹಾರ ಹಣ ಇಂತಿಷ್ಟು ಬೇಕು ಎಂದು ಬೇಡಿಕೆ ಇಟ್ಟಿರುವುದಿಲ್ಲ. ಚಾಸಾ-1 ರವರ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.